**Code No. 16 Z**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ – ಪ್ರವೀಣ ದರ್ಜೆ – ತೃತೀಯ ಪತ್ರಿಕೆ

# (ಸಂಕ್ಷೇಪಿಸುವಿಕೆ)

ಜನವರಿ, 2016

ವೇಳೆ { ಉಕ್ತಲೇಖನ : 10 ನಿಮಿಷಗಳು
ವಿಸ್ತರಣೆ : 1 ಗಂಟೆ 30 ನಿಮಿಷಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಮುನ್ನೂರು (300) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳು ಶೀಘ್ರಲಿಪಿಯನ್ನು ಪರೋಕ್ಷ ವಿಧಾನದಲ್ಲಿ ಸುಮಾರು 1000 ಅಕ್ಷರಗಳಿಗೆ ಲಿಪಿ ಬರಹದಲ್ಲಿ ಸಂಕ್ಷೇಪಿಸಬೇಕೆಂದು ಅಭ್ಯರ್ಥಿಗಳಿಗೆ ಸೂಚನೆ ನೀಡತಕ್ಕದ್ದು

---

ಭಾರತದ ಸಂಸತ್ ಭವನದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರೊಬ್ಬರು ಈ ರೀತಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಮಾನ್ಯ ಸಭಾಪತಿಗಳೇ,

ಮಾನ್ಯ ರಾಷ್ಟ್ರಪತಿಯವರ ಭಾಷಣದಲ್ಲಿ
$\frac{1}{4}$ ಬಹಳ ಪ್ರಮುಖವಾ/ಗಿ ಇಡೀ ರಾಷ್ಟ್ರದ
ಜನತೆಯ ಗಮನವನ್ನು ಸೆಳೆದಿರುವಂತಹ
ವಿಷಯ ಯಾವುದೆಂದರೆ, ಪ್ರಾದೇಶಿಕ
ಅಸಮಾನತೆಗೆ ಸಂಬಂಧಪಟ್ಟ ವಿಚಾರ. ಅಂದರೆ,
ಇಡೀ ರಾಷ್ಟ್ರ ಎಲ್ಲಾ ರೀತಿಯಲ್ಲೂ ಸಮಗ್ರವಾಗಿ
$\frac{1}{2}$ ಅಭಿವೃದ್ಧಿಯಾಗಬೇಕು, ಎ/ಲ್ಲಿಯೂ ಸಹ
ಅನ್ಯಾಯವಾಗದ ರೀತಿಯಲ್ಲಿ ನಾವು
ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬ
ಸರ್ಕಾರದ ಚಿಂತನೆ ನಿಜವಾಗಿಯೂ ಸಹ ಇಡೀ
ರಾಷ್ಟ್ರದ ಜನತೆಯ ಗಮನವನ್ನು ಸೆಳೆದಿದೆ. ಆ
$\frac{3}{4}$ ದಿಕ್ಕಿನಲ್ಲಿ ಕಳೆದ ವರ್ಷ ಅತ್ಯುತ್ತಮ/ವಾದ
ಕೆಲಸಗಳಾಗಿವೆ. ಅಂದರೆ, ಅಧಿಕಾರಿಗಳು
ಬಹಳ ಆಸಕ್ತಿವಹಿಸಿ ಕಾರ್ಯನಿರ್ವಹಿಸಿದ
ಪರಿಣಾಮವಾಗಿ ಮಾನವ ಸಂಪನ್ಮೂಲಗಳ
ಅಭಿವೃದ್ಧಿಯಂತಹ ಅನೇಕ ಅಂಶಗಳನ್ನೊಳ
ಗೊಂಡಂತೆ ಒಳ್ಳೊಳ್ಳೆ ಕೆಲಸಗXಳಾಗಿವೆ. ರಾಷ್ಟ್ರದ 1
ಯಾವ ಯಾವ ರಾಜ್ಯಗಳಲ್ಲಿ ಯಾವ ರೀತಿಯ
ಪರಿಸ್ಥಿತಿಗಳಿವೆ. ಅಲ್ಲಿ ಆಗಬೇಕಾಗಿರುವಂಥ
ಕಾರ್ಯಕ್ರಮಗಳೇನು ಎಂಬುದನ್ನು
ಅಂಕಿಸಂಖ್ಯೆಗಳ ಮೂಲಕ ಗುರುತಿಸಿರುವುದು
ಅತ್ಯುತ್ತಮವಾದ ಪ್ರಯೋಗವಾಗಿ/ದೆ. ಇದನ್ನು $\frac{1}{4}$
ಗಮನದಲ್ಲಿಟ್ಟುಕೊಂಡು ಇವತ್ತು ಪಶ್ಚಿಮ
ಬಂಗಾಳ ಇರಬಹುದು. ಮಹಾರಾಷ್ಟ್ರ
ಇರಬಹುದು. ಅವುಗಳ ಸಮಸ್ಯೆಗಳು ಬೇರೆ ಬೇರೆ
ರೀತಿಯಾಗಿವೆ. ಅದೇ ರೀತಿ ಕೇರಳ,
ತಮಿಳುನಾಡು ರಾಜ್ಯಗಳ ಸಮಸ್ಯೆಗಳು ಮ/ತ್ತು $\frac{1}{2}$
ಕರ್ನಾಟಕ, ಆಂಧ್ರಪ್ರದೇಶದ ಸಮಸ್ಯೆಗಳು ಬೇರೆ
ರೀತಿಯಾಗಿವೆ. ಉತ್ತರ ಭಾರತದ ರಾಜ್ಯಗಳಲ್ಲಿ

[ Turn over

ಆಗಬೇಕಾಗಿರುವ ಅಭಿವೃದ್ಧಿ ಕಾರ್ಯಗಳಿಗೆ
ಸಂಬಂಧಿಸಿದಂತಹ ಸಮಸ್ಯೆಗಳು ಬೇರೆ
$\frac{3}{4}$ ರೀತಿಯಾಗಿವೆ. ಈ ಸಲುವಾಗಿ/ ಪ್ರತ್ಯೇಕ
ಒಂದು ನಿಗಮವನ್ನು ಮಾಡಿ, ಆ ಮೂಲಕ
ಹಣಕಾಸಿನ ವ್ಯವಸ್ಥೆ ಮಾಡುವ ಮಾತನ್ನು
ಮಾನ್ಯ ರಾಷ್ಟ್ರಪತಿಯವರ ಭಾಷಣದಲ್ಲಿ
ಏನು ಹೇಳಲಾಗಿದೆ, ಅದು ನಿಜವಾಗಿಯೂ
ಸಹ ಸ್ವಾಗತಾರ್ಹವಾದ ಒಂದು
2 ಕಾರ್ಯಕ್ರಮವಾಗಿದೆ.X

ಮಾನ್ಯ ಸಭಾಪತಿಯವರೇ, ಮಾನ್ಯ
ರಾಷ್ಟ್ರಪತಿಯವರ ಭಾಷಣದಲ್ಲಿ ಜನತೆಯ
ಗಮನವನ್ನು ಸೆಳೆದಿರುವಂತಹ ಮತ್ತೊಂದು
ವಿಚಾರವೆಂದರೆ ರಸ್ತೆ ರಿಪೇರಿಗೆ
ಸಂಬಂಧಿಸಿದಂತಹ ವಿಚಾರ. ಇದು ಈ
$\frac{1}{4}$ ರಾಷ್ಟ್ರದ ಅಭಿವೃದ್ಧಿ ದೃ/ಷ್ಟಿಯಿಂದ
ಕೂಡ ಆಗಬೇಕಾಗಿರುವಂತಹ ಅಗತ್ಯ
ಕಾರ್ಯಕ್ರಮವಾಗಿದೆ. ರಸ್ತೆಗಳ ವಿಚಾರದಲ್ಲಿ
ಜನರ ಅಭಿಪ್ರಾಯ ಎಷ್ಟರ ಮಟ್ಟಿಗೆ
ಕೆಟ್ಟಿತ್ತೆಂದರೆ, ಅದು ಗ್ರಾಮಾಂತರ
ಪ್ರದೇಶಗಳ ರಸ್ತೆಗಳಾಗಿರಬಹುದು. ಜಿಲ್ಲಾ
$\frac{1}{2}$ ಮುಖ್ಯ/ ರಸ್ತೆಗಳಾಗಿರಬಹುದು, ರಾಜ್ಯದ
ಹೆದ್ದಾರಿಗಳಾಗಿರಬಹುದು, ಹಾಗೂ ರಾಷ್ಟ್ರ
ಹೆದ್ದಾರಿಗಳಾಗಿರಬಹುದು ಯಾವ
ರಸ್ತೆಗಳಲ್ಲಿಯೂ ಕೂಡ ಜನರು
ಸಂಚರಿಸುವಂತಹ ಪರಿಸ್ಥಿತಿ ಇರಲಿಲ್ಲ. ಇದರ
$\frac{3}{4}$ ಬಗ್ಗೆಯೂ ಸಹ ಜನತೆ/ ಆಕ್ರೋಶವನ್ನು
ವ್ಯಕ್ತಪಡಿಸಿದ್ದಾರೆ. ಈ ಉದ್ದೇಶಕ್ಕಾಗಿಯೇ
ಸರ್ಕಾರ ನಬಾರ್ಡ್ ಯೋಜನೆಯನ್ನು
ಪ್ರಾರಂಭಿಸಿತು. ಆದರೆ ನಬಾರ್ಡ್
ಯೋಜನೆಯಿಂದ ಬಂದಂತಹ ಹಣ ಎಲ್ಲಿ
ಬಳಕೆಯಾಗಬೇಕು, ಯಾವ ಕ್ಷೇತ್ರದಲ್ಲಿ ಕಡಿಮೆ
ಕೆಲಸಗಳಾXಗಿವೆ ಎಂಬ ಬಗ್ಗೆ ಯಾವುದೇ 3
ಅಂಕಿ ಅಂಶಗಳನ್ನು ತೆಗೆದುಕೊಳ್ಳದೆ ಮನಸ್ಸಿಗೆ
ಬಂದಂತೆ ನಬಾರ್ಡ್ ಕಾರ್ಯಕ್ರಮವನ್ನು
ರೂಪಿಸಲಾಯಿತು. ಯಾರು ಯಾರಿಗೆ
ಎಷ್ಟೆಷ್ಟು ಬಲ ಇದೆ ಅಷ್ಟಷ್ಟು ಹಣ
ಬಿಡುಗಡೆಯಾಯಿತು. ಆದರೆ ಆ ಹಣ
ಖ/ರ್ಚಾಗಿಯೇ ಇಲ್ಲವೆ, ನಬಾರ್ಡ್ $\frac{1}{4}$
ತಿಳಿಸಿರುವಂತಹ ಗೈಡ್‌ಲೈನ್ಸ್ ಪ್ರಕಾರ
ರಸ್ತೆಗಳ ಕ್ವಾಲಿಟಿ ಇದೆಯೋ ಇಲ್ಲವೋ
ಎನ್ನುವುದರ ಬಗ್ಗೆ ಸರ್ಕಾರ ಗಮನ ನೀಡಿಲ್ಲ.
ಕೋಟ್ಯಾಂತರ ರೂಪಾಯಿಗಳನ್ನು ಸಾಲ
ತಂದಂತಹ ಹಣದ ಬಗ್ಗೆ ಸರ್ಕಾರಕ್ಕೆ ಎಷ್ಟು
ಜವಾಬ್ದಾರಿ ಇ/ರಬೇಕಾಗುತ್ತದೆ ತಾವೇ $\frac{1}{2}$
ಹೇಳಿ. ಆ ರೀತಿ ಸಾಲ ಮಾಡಿ
ತಂದಂತಹ ಹಣ ಸರಿಯಾದ ರೀತಿಯಲ್ಲಿ
ವಿನಿಯೋಗವಾಗಿದೆಯೇ ಎಂಬುದರ ಕಡೆಗೆ
ಸರ್ಕಾರ ಗಮನಹರಿಸದೆ ಇರುವುದರಿಂದ
ಯದ್ವಾತದ್ವಾ ಕೆಲಸಗ/ಳು ಆಗಿವೆ. ಇದಕ್ಕೆ $\frac{3}{4}$
ಕಡಿವಾಣ ಹಾಕಿ ರಾಜ್ಯದ ರಸ್ತೆಗಳ
ಅಭಿವೃದ್ಧಿಯಾಗಬೇಕೆಂದು ರಾಷ್ಟ್ರ ಹೆದ್ದಾರಿಗಳ
ಅಭಿವೃದ್ಧಿಯಾಗಬೇಕೆಂದು ರಾಷ್ಟ್ರಪತಿಯವರ
ಭಾಷಣದಲ್ಲಿ ಸರ್ಕಾರ ತನ್ನ ಚಿಂತನೆಯನ್ನು
ಏನು ಹೇಳಿದೆ ಇದು ನಿXಜವಾಗಿಯೂ ಸಹ 4
ರಾಷ್ಟ್ರದ ಅಭಿವೃದ್ಧಿಯ ದೃಷ್ಟಿಯಿಂದ
ಅತ್ಯುತ್ತಮವಾದ ಕಾರ್ಯಕ್ರಮವೆಂದು ನಾನು
ಅದನ್ನು ಸ್ವಾಗತ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಮನಸ್ಸಿಗೆ
ಅತ್ಯಂತ ದುಃಖ ತರುವಂತಹ ಒಂದು
ವಿಚಾರವೆಂದರೆ, ರೈತ/ರ ಆತ್ಮಹತ್ಯೆ ವಿಚಾರ. $\frac{1}{4}$
ನಮ್ಮ ರಾಷ್ಟ್ರದ ಕರ್ನಾಟಕ ರಾಜ್ಯದ
ಇತಿಹಾಸದಲ್ಲೇ ರೈತರು ಇಷ್ಟೊಂದು

ಪ್ರಮಾಣದಲ್ಲಿ ಆತ್ಮಹತ್ಯೆ ಮಾಡಿಕೊಂಡಿರಲಿಲ್ಲ.
ಆದರೆ ಈ ಬಾರಿ ಕರ್ನಾಟಕ ರಾಜ್ಯದ ಅನೇಕ
$\frac{1}{2}$ ಭಾಗಗಳಲ್ಲಿ ಹಿಂದೆಂದೂ ಕಾಣದಂ/ತಹ
ರೀತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ
ಅದೇ ರೀತಿ ರಾಷ್ಟ್ರದ ಬೇರೆ ಬೇರೆ ರಾಜ್ಯಗಳಲ್ಲಿ
ಕೂಡ ತಾವು ಬೆಳೆದಂತಹ ಬೆಳೆಗೆ ಸರಿಯಾದ
ಬೆಲೆ ಸಿಗದೆ ಇರುವ ಪರಿಣಾಮವಾಗಿ ಅವರು
$\frac{3}{4}$ ತಾವು ಮಾಡಿದಂತಹ ಸಾಲ/ತೀರಿಸಲಾಗದೆ
ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ
ಒಂದು ಘಟನೆ ಮನಸ್ಸಿಗೆ ಅತ್ಯಂತ
ನೋವನ್ನುಂಟು ಮಾಡುವಂತಹ ಪರಿಸ್ಥಿತಿಯನ್ನು
ನಾವು ರಾಷ್ಟ್ರದಲ್ಲಿ ನೋಡಿದ್ದೇವೆ. ಮತ್ತೆ ಅಂತಹ
5 ಪರಿಸ್ಥಿತಿ ಈ ರಾಷ್ಟ್ರದಲ್ಲಿ ಬರಬಾರXದೆಂಬ
ಕಾರಣದಿಂದ ವ್ಯವಸಾಯಕ್ಕೆ ಸಂಬಂಧಿಸಿದಂತೆ
ಸರ್ಕಾರ ಅತ್ಯುತ್ತಮವಾದ ಕಾರ್ಯಕ್ರಮಗಳನ್ನು
ಹಮ್ಮಿಕೊಳ್ಳಲು ಯೋಚಿಸಿದೆ. ದೇಶದ ಹಲವು
ಕಡೆ ಸಾಕಷ್ಟು ಪ್ರಮಾಣದಲ್ಲಿ ಕೃಷಿ
$\frac{1}{4}$ ಮಾರುಕಟ್ಟೆಗಳನ್ನು ಪ್ರಾರಂಭಿಸುವುದರ/
ಮೂಲಕ ಮಾರುಕಟ್ಟೆಗೆ ಸಂಬಂಧಿಸಿದ
ಅನುಕೂಲಗಳನ್ನು ಮಾಡಿಕೊಡುವುದರ ಜೊತೆಗೆ
ಬೆಳೆ ವಿಮೆ ಬಗ್ಗೆ ಆಲೋಚನೆ ಮಾಡಿರುವುದು
ಇವೆಲ್ಲವೂ ಸಹ ರಾಷ್ಟ್ರದ ರೈತರ ಹಿತದೃಷ್ಟಿಯಿಂದ
$\frac{1}{2}$ ಒಂದು ಸ್ವಾಗತಾರ್ಹವಾದಂತಹ ಕಾರ್ಯ/
ಕ್ರಮಗಳಾಗಿವೆ. ಈ ಎಲ್ಲಾ ಕಾರ್ಯಕ್ರಮಗಳು
ಕೂಡ ಪರಿಣಾಮಕಾರಿಯಾಗಿ ಹೊರಬರಲೆಂದು
ನಾನು ಕೂಡ ಶುಭಾಶಯಗಳನ್ನು ಕೋರುತ್ತೇನೆ.

ಹಾಗೆಯೇ, ಸಮಾಜದಲ್ಲಿ ಹಲವಾರು
ವರ್ಷಗಳಿಂದ ಶೋಷಣೆಗೆ ಒಳಗಾಗಿರುವ
$\frac{3}{4}$ ಹಿಂದು/ಳಿದ ವರ್ಗದವರು. ಪರಿಶಿಷ್ಟ
ಜಾತಿಯವರು, ಅಲ್ಪ ಸಂಖ್ಯಾತರುಗಳಿಗೆ
ಉತ್ತಮ ಕಾರ್ಯಕ್ರಮಗಳನ್ನು
ಹಾಕಿಕೊಳ್ಳಲಾಗುತ್ತದೆಂದು ರಾಷ್ಟ್ರಪತಿಯವರ
ಭಾಷಣದಲ್ಲಿಯೇ ಸ್ಪಷ್ಟವಾಗಿ ತಿಳಿಸಲಾಗಿದೆ.
ನಾನು ಈ ಸಂದರ್ಭದಲ್ಲಿX ಸರ್ಕಾರದಲ್ಲಿ 6
ವಿನಂತಿ ಮಾಡಿಕೊಳ್ಳುವುದೇನೆಂದರೆ, ಇಂತಹ
ಕಾರ್ಯಕ್ರಮಗಳು ಯಾವ ಹಂತವನ್ನು
ತಲುಪಿವೆಯೋ ಎನ್ನುವ ಬಗ್ಗೆ
ನೋಡಬೇಕಾಗುತ್ತದೆ. ಆಮೇಲೆ ಹಿಂದುಳಿದ
ಜನಾಂಗಕ್ಕೆ ಸೇರಿದವರು ಹಾಗೂ ಪರಿಶಿಷ್ಟ ಜಾತಿ
ಮತ್ತು/ ಪರಿಶಿಷ್ಟ ಜನಾಂಗದವರು ಕಳೆದ $\frac{1}{4}$
ಹತ್ತಾರು ವರ್ಷಗಳಿಂದ ಪ್ರಾರಂಭ ಮಾಡಿರುವ
ಶಿಕ್ಷಣ ಸಂಸ್ಥೆಗಳಿಗೆ ಅನುದಾನ ಸಿಗುತ್ತಿಲ್ಲ.
ಎಂಬುದರ ಬಗ್ಗೆ ಆಲೋಚನೆ ಮಾಡಲು ಮಾನ್ಯ
ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರಕ್ಕೆ
ಮ/ನಸ್ಸಿದೆಯೆಂದು ಅವರು ರಾಷ್ಟ್ರಪತಿಯವರ $\frac{1}{2}$
ಭಾಷಣದಲ್ಲಿ ಹೇಳಿರುವ ಮಾತುಗಳಿಂದ ನಮಗೆ
ಅರ್ಥವಾಗುತ್ತದೆ. ನಂತರ ಪರಿಶಿಷ್ಟ ವರ್ಗದ
ಜನಾಂಗದವರ ಅಭಿವೃದ್ಧಿಗಾಗಿ ಪ್ರತ್ಯೇಕ
ನಿರ್ದೇಶನಾಲಯವನ್ನು ಸ್ಥಾಪನೆ ಮಾ/ಡುವ $\frac{3}{4}$
ಬಗ್ಗೆಯೂ ಸರ್ಕಾರ ಆಲೋಚಿಸುತ್ತಿರುವುದು
ನಿಜಕ್ಕೂ ಒಳ್ಳೆಯ ವಿಚಾರವಾಗಿದೆ. ಹಾಗೆಯೇ
ಅಲ್ಪ ಸಂಖ್ಯಾತ ಜನಾಂಗದ ಮಕ್ಕಳಿಗೆ ಉಚಿತ
ಶಿಕ್ಷಣ ಕೊಡುವುದು, ಅವರ ಆರ್ಥಿಕ
ಮಟ್ಟವನ್ನು ಸುಧಾರಣೆ ಮಾಡುವುದು
ಮುಂತಾದX ಕಾರ್ಯಕ್ರಮಗಳನ್ನು 7
ಹಾಕಿಕೊಳ್ಳುವ ಬಗ್ಗೆ ರಾಷ್ಟ್ರಪತಿಯವರ
ಭಾಷಣದಲ್ಲಿ ತಿಳಿಸಿದ್ದಾರೆ. ಈ ಕಾರ್ಯಕ್ರಮ
ಕೂಡ ಸ್ವಾಗತಾರ್ಹವೆಂದು ನಾನು ಈ
ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಹೆಣ್ಣು ಮಕ್ಕಳ ವಿಚಾರ ಇವತ್ತಿನ

$\frac{1}{4}$ ದಿವಸ ಹೆಣ್ಣು/ಮಕ್ಕಳು ರಾಷ್ಟ್ರದಲ್ಲಿ ಒಂದು
ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸರ್ಕಾರಿ
ಕೆಲಸಕ್ಕಾಗಿ, ಅರೆ ಸರ್ಕಾರಿ ಕೆಲಸಕ್ಕಾಗಿ ಅರಸಿ
ಬರುತ್ತಾರೆ. ಹೀಗೆ ಬರುವ ಎಲ್ಲಾ
ಹೆಣ್ಣುಮಕ್ಕಳಿಗೆ ಅಂತಹ ಸ್ಥಳಗಳಲ್ಲಿ
$\frac{1}{2}$ ಸ್ನೇಹಿತರಾಗಲೀ ಅಥವಾ ನೆಂ/ಟರಾಗಲೀ
ಇರುವುದಿಲ್ಲ. ಆದಕಾರಣ ಅವರಿಗೆ
ಮಾನವೀಯತೆಯ ದೃಷ್ಟಿಯಿಂದ ಉಳಿದುಕೊಳ್ಳಲು
ಮತ್ತು ಮಹಿಳೆಯರ ಗೌರವವನ್ನು ಹೆಚ್ಚಿಸಲು
ಅವರಿಗೆ ಭದ್ರತೆಯನ್ನು ಒದಗಿಸಬೇಕು.
$\frac{3}{4}$ ಹಾಗೂ ಅವರಿಗೂ ಸಹ ಸಾಮಾ/ಜಿಕವಾಗಿ
ಎತ್ತರದ ಸ್ಥಾನಮಾನಗಳನ್ನು ನೀಡಬೇಕು.
ಅವರೂ ಸಮಾಜದಲ್ಲಿ ಮುಂದೆ ಬರಬೇಕೆಂದು
ಹೆಣ್ಣು ಮಕ್ಕಳಿಗೆ ವಸತಿ ನಿಲಯಗಳನ್ನು
ಮಾಡುವಂತಹ ಒಂದು ಅತ್ಯುತ್ತಮವಾದಂತಹ
8 ಕಾರ್ಯಕ್ರಮವನ್ನು ನಮ್ಮ ಸರ್ಕಾರX
ಘೋಷಣೆ ಮಾಡಿರುವುದನ್ನು ಎಲ್ಲರೂ
ಸ್ವಾಗತಿಸುತ್ತಾರೆ. ಅಷ್ಟೇ ಅಲ್ಲ, ನಮ್ಮ ಗೌರವಾನ್ವಿತ
ಮಾನ್ಯ ಪ್ರಧಾನ ಮಂತ್ರಿಗಳು ಚುನಾವಣೆಯ
ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ಉನ್ನತ
ಶಿಕ್ಷಣವನ್ನು ಉಚಿತವಾಗಿ ನೀಡುತ್ತೇವೆಂದು
$\frac{1}{4}$ ರಾಷ್ಟ್ರದ/ ಜನತೆಗೆ ಆಶ್ವಾಸನೆಯುನ್ನು
ಕೊಟ್ಟಿದ್ದರು. ಆ ಕಾರ್ಯಕ್ರಮ ಕೂಡ ಈಗ
ಈಡೇರುತ್ತಿದೆ. ಆದಕಾರಣ ಮಹಿಳೆಯರ
ಹಿತದೃಷ್ಟಿಯಿಂದ ಈ ಕಾರ್ಯಕ್ರಮ
ಸ್ವಾಗತಾರ್ಹವಾಗಿದೆಯೆಂದು ನಾನು ತಮ್ಮ
$\frac{1}{2}$ ಗಮನವನ್ನು ಸೆಳೆಯಬಯಸುತ್ತೇನೆ./

ಇನ್ನು ನಮ್ಮ ರಾಷ್ಟ್ರಪತಿಯವರ
ಭಾಷಣದಲ್ಲಿ ಪ್ರತಿಭಾವಂತ ಕ್ರೀಡಾಪಟುಗಳ
ಬಗ್ಗೆ ಬಹಳ ಕೂಲಂಕಷವಾಗಿ ತಿಳಿಸಿದ್ದಾರೆ. ಈ
ಬಗ್ಗೆ ಹೇಳುವುದಾದರೆ, ಪಟ್ಟಣ ಪ್ರದೇಶಗಳಲ್ಲಿ
ಮಾತ್ರ ಹೆಚ್ಚಿನ ಪ್ರಮಾಣದಲ್ಲಿ ಕ್ರೀಡೆಗಳಿ/ಗೆ $\frac{3}{4}$
ಉತ್ತೇಜನ ನೀಡಲಾಗುತ್ತಿದೆ. ಅದೇ ರೀತಿ
ಅಷ್ಟೇ ಪ್ರಮಾಣದಲ್ಲಿ ಗ್ರಾಮಾಂತರ
ಪ್ರದೇಶಗಳಲ್ಲಿನ ಕ್ರೀಡಾಪಟುಗಳಿಗೆ ಹಾಗೂ
ಕ್ರೀಡೆಗಳಿಗೆ ಸರ್ಕಾರದವರು ಸಾಕಷ್ಟು
ಉತ್ತೇಜನ ಕೊಡದಿರುವುದನ್ನು ನೋಡಿದರೆ
ಬಹಳ ವ್ಯXಥೆಯಾಗುತ್ತದೆ. ಇದರಿಂದಾಗಿ 9
ಗ್ರಾಮಾಂತರ ಮಟ್ಟದಲ್ಲಿ ಪುರಾತನ
ಕಾಲದಿಂದಲೂ ಅತ್ಯಾಕರ್ಷಕವಾಗಿ
ನಡೆದುಕೊಂಡು ಬರುತ್ತಿರುವ ಕ್ರೀಡೆಗಳು
ನಶಿಸಿಹೋಗಲು ಕಾರಣವಾಗಿರುತ್ತದೆ. ಅಲ್ಲದೆ
ಗ್ರಾಮಾಂತರ ಪ್ರದೇಶದ ಪ್ರತಿ/ಭಾವಂತರ $\frac{1}{4}$
ಕ್ರೀಡಾಪಟುಗಳಿಗೆ ಅವಕಾಶ ದೊರೆಯದೇ
ಅವರಲ್ಲಿ ಒಂದು ರೀತಿಯ ಜಿಗುಪ್ಸೆಯುಂಟಾಗಿ
ಕ್ರೀಡೆಗಳ ಬಗ್ಗೆ ತಮ್ಮ ಆಸಕ್ತಿಯನ್ನು
ಕಳೆದುಕೊಳ್ಳುವ ಪ್ರಸಂಗ ಒದಗಿ ಬರುತ್ತದೆ.
ಇದೇ ರೀತಿ ಸರ್ಕಾರದವರು ಗ್ರಾಮಾಂತ/ರ $\frac{1}{2}$
ಕ್ರೀಡಾಪಟುಗಳಿಗೆ ಹಾಗೂ ಕ್ರೀಡೆಗಳಿಗೆ
ಗಮನಕೊಡದೇ ಹೋದಲ್ಲಿ ಗ್ರಾಮಾಂತರ
ಮಟ್ಟದ ಕ್ರೀಡೆಗಳನ್ನು ನಾವು ಇನ್ನು ಮುಂದೆ
ಪುಸ್ತಕಗಳಲ್ಲಿ ಓದಿ ತಿಳಿದುಕೊಳ್ಳುವಂತಹ
ಪ್ರಸಂಗ ಬಂದರೂ ಬರಬಹುದು ಆದ್ದರಿಂದ
ಗ್ರಾಮಾಂ/ತರ ಮಟ್ಟದ ಪ್ರತಿಭಾವಂತ ಕ್ರೀಡೆ $\frac{3}{4}$
ಹಾಗೂ ಕ್ರೀಡಾಪಟುಗಳಿಗೆ ಸರ್ಕಾರದವರು
ಹೆಚ್ಚಿನ ಪ್ರೋತ್ಸಾಹವನ್ನು ಕೊಡುವತ್ತ
ತಮ್ಮ ಗಮನಹರಿಸಬೇಕೆಂದು ಕೇಳಿಕೊಂಡು
ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು
ಮುಗಿಸುತ್ತೇನೆ.X 10